

ವಿದ್ವಾಂಸ ಪೆರ್ರಿ ನೋಡಲ್‌ಮನ್ 'Hidden adult' ಎಂದೇ ಈ ಬಗೆಯ ಬರವಣಿಗೆಯ ಹಿನ್ನೆಲೆಯ ಮನೋಧರ್ಮವನ್ನು ಗುರುತಿಸಿರುವುದು. ಹೀಗಿರುವಾಗ ಮಕ್ಕಳ ಓದನ್ನು ಮಕ್ಕಳಲ್ಲಿಯೇ ಕಾಣುವುದು, ಅದಕ್ಕಾಗಿ ಅವರಲ್ಲಿ ಓದಿನ ಚಟುವಟಿಕೆ ಹೆಚ್ಚಿಸಲು ತೊಡಗುವುದು ಮಕ್ಕಳ ಸಾಹಿತ್ಯದ ರಚನೆಯಲ್ಲಿ ತೊಡಗಿಕೊಂಡವನಿಗೇ ಮೀಸಲಾದ ಹೊಣೆ ಅಲ್ಲ. ಇಂಥ ಹೊಣೆ ಎಲ್ಲರದು – ಶಿಕ್ಷಕರದು, ಪಾಲಕರದು, ನಮ್ಮ ಗ್ರಂಥಾಲಯ ಇಲಾಖೆಯವರದು, ಮಕ್ಕಳ ಶ್ರೇಯೋಭಿವೃದ್ಧಿ ಬಯಸುವ ಎಲ್ಲರದು. ಅಂಥದು ನಮ್ಮ ನಡುವೆ ಖಂಡಿತ ಹೆಚ್ಚು ಹೆಚ್ಚು ಅಗಬೇಕಿದೆ. ಇಂದಿನ ಕಾಂಪಿಟೇಟಿವ್ ಜಗತ್ತಿನಲ್ಲಿ ಈ ಬಗೆಯ ಓದನ್ನು ನಿರ್ಲಕ್ಷಿಸುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಅದೊಂದು ವಿಪರ್ಯಾಸ. ನಾನೇ ನಮ್ಮ ಗೆಳೆಯರ ಬಳಗ ಕಟ್ಟಿಕೊಂಡು ನಮಗೆ ತಿಳಿದ ಸಾಧ್ಯತೆಗಳಿಗಾಗಿ ಸಾಕಷ್ಟು ಶಾಲೆಗಳಿಗೆ ಅಡಾಡುತ್ತ ಬಂದುದಿದೆ. ಅದೇ ಒಂದು ವಿಶಿಷ್ಟ ಅನುಭವ.

ಇದನ್ನು ಮಾತ್ರ ಖಂಡಿತ ನಾನು ಹೇಳುತ್ತೇನೆ. ಮಕ್ಕಳ ಸಾಹಿತ್ಯಕ್ಕೆ ತಕ್ಕುದಾದ ವಾತಾವರಣ ಬೇಕು. ಅದಕ್ಕೇ ಅದರದೇ ಆದ ಅಗತ್ಯಗಳಿವೆ. ಅದು ನಮ್ಮ ನಡುವೆ ಸಾಧ್ಯವಾಗುತ್ತಿಲ್ಲ. ಆ ಕಡೆಗೆ ಯಾರೂ ಲಕ್ಷ್ಯ ವಹಿಸುವುದೇ ಇಲ್ಲ. ನಮ್ಮೆಲ್ಲ ಅಕಾಡೆಮಿ, ಪರಿಷತ್ತು ಅಂಥ ಸಂಸ್ಥೆಗಳೆಲ್ಲ ದೊಡ್ಡವರ ಸಾಹಿತ್ಯದ ತಾಣಗಳೇ ಆಗಿಬಿಟ್ಟಿವೆ. ಮಕ್ಕಳ ಸಾಹಿತ್ಯದ ಕಡೆಗೆ ಅವರೆಲ್ಲ ಹೊರಳುವುದು 'ಇರಲಿ, ಅದೂ ಒಂದು' ಅನ್ನೋ ಮನೋಭಾವನೆಯಿಂದಲೇ ಹೊರತು ಅಲ್ಲಿ ಯಾವ ನಿರ್ದಿಷ್ಟ ಚಟುವಟಿಕೆಗಳೂ ಕಾಣುವುದಿಲ್ಲ. ಇದೊಂದು ಬಲು ಬೇಸರದ ವಿಷಯ. ನಾವು ನಾವೇ ಖಾಸಗಿಯಾಗಿ ಮಾಡಿಕೊಂಡ ವೇದಿಕೆಗಳೇ ಒಂದಿಷ್ಟು ಆಸರೆ ಆಗಿವೆ.

◆ **ಕಥೆ-ಕವಿತೆಗಳು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವಂತಿರಬೇಕು. ಅವುಗಳಲ್ಲಿ ಫ್ಯಾಂಟಸಿಯ ಅಂಶ ಸಲ್ಲದು; ದೆವ್ವ ಭೂತಗಳನ್ನು ಬರವಣಿಗೆಯಲ್ಲಿ ತರುವುದೂ ಸರಿಯಲ್ಲ ಎನ್ನುವಂಥ ಅಭಿಪ್ರಾಯಗಳಿವೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಹಾಗೆಯೇ, ಮಕ್ಕಳ ಸಾಹಿತ್ಯದಲ್ಲಿ 'ನೀತಿ'ಯ ಪಾತ್ರವೇನು?**

ವೈಜ್ಞಾನಿಕ ಮನೋಭಾವ ಅನ್ನೋದು ಅನೇಕ ಸಲ ತಪ್ಪುತಪ್ಪಾಗಿ ಬಳಕೆಯಾಗುತ್ತಿದೆ ಅಂತ ನನಗೆ ಅನಿಸಿದೆ. ಅದು ಔಚಿತ್ಯವನ್ನ ಕಂಡುಕೊಳ್ಳುವ ಮನೋಭಾವ ಅಂದರೇ ಸರಿ ಅನಿಸಿದೆ. ಇರಲಿ, ಮಕ್ಕಳಲ್ಲಿ ಕಲಿಕೆ ಎಂದುಕೊಳ್ಳುವಾಗಲೇ ಇಂಥವೆಲ್ಲ ಪ್ರಶ್ನೆಗಳು ಏಳುತ್ತವೆ. ಪ್ರತ್ಯೇಕವಾಗಿ ಸಾಹಿತಿಯಲ್ಲಿಯೇ ಇದನ್ನ ಕೇಳುವ ಅಗತ್ಯವಿಲ್ಲ ಅಂದುಕೊಳ್ಳುತ್ತೇನೆ. ಫ್ಯಾಂಟಸಿ